# ನೀನೆ ನನ್ನ ಗುರುವು.

ನೀನೆ ನನ್ನ ಗುರುವು | ನೀನೆ ನನ್ನ ಇರುವು |
ನೀನೆ ನನ್ನ ದೈವವು | ನೀನೆ ನನ್ನ ಜೀವವು | ಪ |

ನೀನೆ ನನ್ನ ಮಾತಾ | ನೀನೆ ನನ್ನ ದಾತಾ |
ನೀನೆ ಬಂಧು ಬಳಗ | ನೀನೇ ಎಲ್ಲವೂ || 1 ||

ನೀನೆ ನನ್ನ ಜ್ಯೋತಿ | ನೀನೆ ನನ್ನ ಆರತಿ ||
ನೀನೆ ನನ್ನ ಕೀರುತಿ | ನೀನೇ ನನ್ನ ಸಾರಥಿ || 2 ||

ಮುಂದೆ ದಾರಿ ತೋರದಯ್ಯ | ಎಲ್ಲೆಲ್ಲೂ ಕತ್ತಲಯ್ಯ |
ಬೆಳಕು ತೋರಿ ಎನ್ನನ್ನು ಮುನ್ನಡೆಸು ಬಾರಯ್ಯ || 3 ||

ಮುಕ್ತಿ ಬೇಡಿ ಬಂದೆ | ಕೃಪೆಯ ಕೋರಿ ನಿಂದೆ |
ನಿನ್ನ ಹರಕೆ ಒಂದೆ ಸಾಕೆನಗೆ ತಂದೆ || 4 ||

ಎಲ್ಲೆಲ್ಲೂ ನೀ ತುಂಬಿರುವೆ | ನನ್ನಲ್ಲೂ ನೀನಿರುವೆ |
ತನಗೆ ತಾನಾಗಿರುವೆ ಓ ಘನಗುರುವೆ || 5 ||

ನಿನ್ನ ಹರಕೆ ನನಗೆ ರಕ್ಷೆ, ನಿನ್ನ ನಾಮವೆ ದೀಕ್ಷೆ |
ನಿನ್ನ ದಾರಿ ನನಗೆ ನಕ್ಷೆ, ಮತ್ತೆ ಭವಕೆ ಬರುವುದೆ ಶಿಕ್ಷೆ || 6 ||

ನಿನ್ನ ಅನುಗ್ರಹವಿರದೆ ನಾ ಉಸಿರಾಡಲಾರೆ |
ನಿನ್ನ ಆಶೀರ್ವಾದವಿರದೆ ಮುನ್ನಡೆಯಲಾರೆ || 7 ||

ಜಪವು ಎನಗೆ ಗೊತ್ತಿಲ್ಲ | ತಪವು ಎನಗೆ ಬರುವುದಿಲ್ಲ |
ನೀ ಕೈಯ ಬಿಟ್ಟರೆ ಎನ್ನ ಕಾಯುವರಿಲ್ಲ || 8 ||

ಈ ಭವ ಶೂನ್ಯ ನೀ ಮಾಡು ಧನ್ನ |
ನಿನ್ನ ಕೃಪೆಯು ಎನ್ನ ಮೇಲೆ ಇರಲಿ ಅನನ್ಯ || 9 ||

ಜಗತ್ತಿಗೆ ನೀನು ತಂದೆ | ಎಲ್ಲ ಮಕ್ಕಳು ನಿನಗೊಂದೆ ||
ಕೃಪೆಯ ಕೋರಿ ಬಂದೆ | ಮುಕ್ತಿ ನೀಡು ಇಂದೆ || 10 ||

ಕಡುಪಾಪಿ ನಾನಯ್ಯ | ಸರ್ವಶಕ್ತ ನೀನಯ್ಯ |
ದಾರಿ ತೋರು ಕನ್ನಯ್ಯ | ಶ್ರೀ ಗುರುವೆ ಮಲ್ಲಯ್ಯ || 11 ||